**ದಿನಾಂಕಃ 30/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: DHR ಪರ ಶ್ರೀ ಬಿ.ಎಂ.ಕೆ ವಕೀಲರಿಂದಃ**

3. ನನ್ನ ಜೊತೆ ಹುಟ್ಟಿದವರು 6 ಜನ ಅಣ್ಣತಮ್ಮಂದಿರು, 2 ಜನ ಅಕ್ಕತಂಗಿಯರು. ನನ್ನ ಅಣ್ಣತಮ್ಮಂದಿರ ಮತ್ತು ಅಕ್ಕತಂಗಿಯರ ಪೈಕಿ ನಾನೇ ವಿದ್ಯಾವಂತನಾಗಿದ್ದೇನೆ. ನನಗೂ ಮತ್ತು ತೀರ್ಪುದಣಿಗೂ ಮಾತು ಕತೆ ಇಲ್ಲ. 8-10 ವರ್ಷಗಳಿಂದ ಪ್ರೀತಿ ವಿಶ್ವಾಸ, ಮಾತುಕತೆ ಇಲ್ಲ. ಮೊದಲನೇ ತೀರ್ಪುಋಣಿಯವರ ಗಂಡ ರಾಮೇಗೌಡ ನನಗೆ ಚಿಕ್ಕಪ್ಪನಾಗಬೇಕು. ಅರ್ಜಿ ಸ್ವತ್ತುಗಳನ್ನು ರಾಮೇಗೌಡರು ಅಣ್ಣೇಗೌಡರಿಗೆ ಮಾರಾಟ ಮಾಡಿದ ನಂತರ ಅವರಿಗೆ ಯಾವುದೇ ಬೇರೆ ಸ್ವತ್ತು ಇಲ್ಲ. ನನ್ನ ತಂದೆಯ ಅಣ್ಣತಮ್ಮಂದಿರು ಭಾಗವಾದ ನಂತರ ಅವರ ಕುಟುಂಬದ ವ್ಯವಹಾರಗಳನ್ನು ಅವರವರೇ ನೋಡಿ ಕೊಳ್ಳುತ್ತಿದ್ದಾರೆ ಎಂದರೆ ಸರಿ. ರಾಮೇಗೌಡರ ಕುಟುಂಬದ ವ್ಯವಹಾರಕ್ಕೂ ನನಗೂ ಸಂಬಂಧ ಇದೆ. ವ್ಯವಹಾರದ ಸಂಬಂಧ ಎಂದರೆ 1 ನೇ ಜೆಡಿಆರ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಮತ್ತು ನೋಡಿಕೊಳ್ಳುವುದು.

4. ರಾಮೇಗೌಡರು 1992-94 ರಲ್ಲಿ ಅರ್ಜಿ ಸ್ವತ್ತುಗಳನ್ನು ಮಾರಾಟ ಮಾಡಿದ ಬಗ್ಗೆ ನನ್ನ ತಕರಾರು ಇದೆ. ಅರ್ಜಿ ಸ್ವತ್ತುಗಳನ್ನು ಈಗಲೂ ನಾವೇ ಉಳುಮೆ ಮಾಡುತ್ತಿದ್ದೇವೆ. ಈ ಅಮಲ್ಜಾರಿ ಅರ್ಜಿಗೆ ತಕರಾರು ಸಲ್ಲಿಸುವಾಗ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ನಾವೇ ಅರ್ಜಿ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದೇವೆಂದು ತಿಳಿಸಿರುತ್ತೇನೆ. ಅರ್ಜಿ ಸ್ವತ್ತುಗಳಲ್ಲಿ ನಮಗೂ ಭಾಗ ಇದೆ ಎಂದು ನಾವು ದಾವೆ ಹೂಡಿಲ್ಲ. 1992-94 ರಲ್ಲಿ ರಾಮೇಗೌಡರು ತಮಗೆ ಬಂದ ಭಾಗದ ಸ್ವತ್ತನ್ನು ಅಣ್ಣೇಗೌಡರಿಗೆ ಮಾರಾಟ ಮಾಡಿದ ಬಗ್ಗೆ ಗೊತ್ತಿರಲಿಲ್ಲ. ಆದರೆ 2016 ರಲ್ಲಿ ನನಗೆ ನೋಟೀಸು ಬಂದಾಗ ಗೊತ್ತಾಯಿತು. ನನಗೆ ನೋಟೀಸು ಬಂದಿರಲಿಲ್ಲ, ಆದರೆ 1 ನೇ ಜೆಡಿಆರ್ ರವರಿಗೆ ನೋಟೀಸು ಬಂದಿತ್ತು. ಅವರೇ ನನಗೆ ತಿಳಿಸಿದ್ದರು. ನೋಟೀಸು ಬಂದ ನಂತರ ನಮಗೂ ಅರ್ಜಿ ಸ್ವತ್ತುಗಳಲ್ಲಿ ಭಾಗಾಂಶ ಇದೆ ಎಂದು ತಕರಾರು ಸಲ್ಲಿಸಲು ತೊಂದರೆ ಇತ್ತು. ಆ ಸಮಯಕ್ಕೆ ನಾವು ಕೂಲಿ ಮಾಡಲು ಹೋಗಿದ್ದರಿಂದ ನಮಗೆ ಗೊತ್ತಾಗಲಿಲ್ಲ. ನ್ಯಾಯಾಲಯದಿಂದ ನನಗೆ ಮತ್ತು ಇತರೆ ಜೆಡಿಆರ್ ಗೆ ಸಮನ್ಸ್ ಜಾರಿಯಾಗಿದ್ದರೂ ಸಹ ಜಾರಿಯಾಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿ ಪರ ಡಿಕ್ರಿಯಾದ ಬಗ್ಗೆ ನನಗೆ ಗೊತ್ತಿರಲಿಲ್ಲ. ವಾದಿಯ ಪರ ಡಿಕ್ರಿ ಆಯಿತು ಎಂದು ಹೇಳಿದ್ದರೂ ಸಹ ನಾವು ಅವರಿಗೆ ತೊಂದರೆ ಕೊಡುತ್ತಿದ್ದ ಬಗ್ಗೆ ಗ್ರಾಮದಲ್ಲಿ ಪಂಚಾಯಿತಿ ಆಯಿತು ಎಂದರೆ ಸರಿಯಲ್ಲ. 1 ನೇ ಜೆಡಿಆರ್ ಗೆ ನೋಟೀಸು ಬಂದ ನಂತರ ಗ್ರಾಮದಲ್ಲಿ ನಾವು ತೀರ್ಪುದಣಿ ಸೇರಿಸಿದಂತೆ ಪಂಚಾಯತಿ ಸೇರಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ತಕರಾರು ಸಲ್ಲಿಸಲು ಕಮಲಮ್ಮ ಮತ್ತು ರವಿಯವರು ಮಾಹಿತಿಯನ್ನು ನೀಡಿದ್ದರು. ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅಣ್ಣೇಗೌಡರನ್ನು ಕರೆಸಿ ಗ್ರಾಮದಲ್ಲಿ ಪಂಚಾಯತಿ ಸೇರಿಸಿದ್ದೆವು ಎಂದು ನನ್ನ ವಕೀಲರಿಗೆ

ಮಾಹಿತಿ ನೀಡಿರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನಮ್ಮ ವಕೀಲರೂ ಸಹ ಮಾಹಿತಿ ಕೊಟ್ಟಿಲ್ಲ.

6. ರಾಮೇಗೌಡರು ಅಣ್ಣೇಗೌಡರಿಗೆ ಅರ್ಜಿ ಸ್ವತ್ತುಗಳನ್ನು ಮಾರಾಟ ಮಾಡಿದ್ದು ನನಗೆ ಇಷ್ಟ ಇರಲಿಲ್ಲ. ರಾಮೇಗೌಡರು ಮಾರಾಟ ಮಾಡಿದ ಕ್ರಯಪತ್ರಕ್ಕೆ ನಾನು ಸಹಿ ಮಾಡಿಲ್ಲ. ಅರ್ಜಿ ಸ್ವತ್ತುಗಳನ್ನು ಬಿಟ್ಟು ಕಮಲಮ್ಮ ಮತ್ತು ನಮಗೆ ಸೇರಿದ ಬೇರೆ ಸ್ವತ್ತುಗಳನ್ನು ಮಾರಾಟ ಮಾಡಿ ಎಂದು ತೀರ್ಪುದಣಿಯು ಒತ್ತಾಯ ಮಾಡಿಲ್ಲ. ಆದರೆ ಅರ್ಜಿ ಸ್ವತ್ತುಗಳಿಗೆ ಮಾತ್ರ ಸಹಿ ಮಾಡಿಕೊಡಿ ಎಂದು ಕೇಳಿದ್ದರು. 4-5 ವರ್ಷಗಳ ಹಿಂದೆ ರಾಮೇಗೌಡರು ಅಣ್ಣೇಗೌಡರಿಗೆ ಮಾರಾಟ ಮಾಡಿದ ಕ್ರಯಪತ್ರಕ್ಕೆ ಸಹಿ ಮಾಡಿ ಎಂದು ಕಮಲಮ್ಮ ನವರಿಗೆ ಕೇಳಿದ್ದರು. ಹಾಗೆ ಸಹಿ ಮಾಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಒಡಹುಟ್ಟಿದವರು ವಿಭಾಗ ಮಾಡಿಕೊಂಡು 30-40 ವರ್ಷ ಆಗಿದೆ. ನನ್ನ ಅಣ್ಣತಮ್ಮಂದಿರ ಪೈಕಿ ನಾನೇ ವಿದ್ಯಾವಂತ, ನಾನೇ ಮನೆಯ ವ್ಯವಹಾರಗಳನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣತಮ್ಮಂದಿರಿಗೆ ಸೇರಿದ ಆಸ್ತಿಗಳನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅವರ ಸಹಿ ಪಡೆಯದೇ ನಾನೇ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ದುಡ್ಡಿನಿಂದ ಆಯತನಹಳ್ಳಿ ಗ್ರಾಮದಲ್ಲಿ ನನ್ನ ಮತ್ತು ನನ್ನ ಮಗನ ಹೆಸರಿಗೆ ಜಮೀನುಗಳನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ.

7. 1992-94 ರಿಂದಲೂ ಅಣ್ಣೇಗೌಡರೇ ಅರ್ಜಿ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ರಾಮೇಗೌಡರು ಅರ್ಜಿ ಸ್ವತ್ತುಗಳನ್ನು ನನಗೆ ಮಾರಾಟ ಮಾಡಿಲ್ಲ ಎಂದು 2016 ರಿಂದಲೂ ಅಣ್ಣೇಗೌಡರಿಗೆ ನಾನು ಮತ್ತು ಕಮಲಮ್ಮ ಹಾಗೂ ರವಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಒ.ಎಸ್.165/2016 ವಾದಿ ಪರ ಡಿಕ್ರಿ ಯಾಗಿದ್ದರೂ ಸಹ ವಾದಿಯ ವ್ಯವಸಹಾಯಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ನ್ಯಾಯ ಪಂಚಾಯತಿ ಆಗಿದ್ದರೂ ಸಹ ಗ್ರಾಮಸ್ಥರಿಗೆ ಬೆಲೆ ಕೊಡುತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬುದ್ದಿವಾದ ಹೇಳಿದ್ದರೂ ಸಹ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕಾಲದಲ್ಲೂ ಅರ್ಜಿ

ಸ್ವತ್ತುಗಳಲ್ಲಿ ವ್ಯವಸಾಯ ಮಾಡಿಲ್ಲದಿದ್ದರೂ ವ್ಯವಸಾಯ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**